ಗಮನ ಸೆಳೆದಿದ್ದಾರೆ. ಈಗಾಗಲೇ ಡಿಪ್ಟಿಕ್ಟ್ ಹೆಲ್ತ್ ಆಫೀಸರಿಗೆ ನಾವು ಆದೇಶ ಕೊಟ್ಟಿದ್ದೇವೆ, ಅವರು ವಿಚಾರಣೆ ಮಾಡುತ್ತಾ ಇದ್ದಾರೆ, ಅದು ಈಗ ವಿಚಾರಣಾ ಹಂತದಲ್ಲಿದೆ. ಅವರು ಯಾರೇ ಆಗಲಿ, ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಈ ಹೆರಿಗೆ ಭತ್ಯವನ್ನು ನಮ್ಮ ಸರ್ಕಾರ ಕೃಷಿ ಕಾರ್ಮಿಕರ ಕುಟುಂಬಕ್ಕೆ ಒಳ್ಳೆಯ ಉದ್ದೇಶಕ್ಕಾಗಿ ಕೊಟ್ಟಿದ್ದಾರೆ. ಆದರೆ ಅಲ್ಲಿ ಗಂಭೀರವಾದ ಆರೋಪ ಕಂಡು ಬಂದಿದೆ ಎಂದು ಮಾನ್ಯ ಸಚಿವರೇ ಒಪ್ಪಿಕೊಂಡಿರುತ್ತಾರೆ. ಆದುದರಿಂದ ಇದರ ಬಗ್ಗೆ ಅತ್ಯಂತ ತೀವ್ರವಾಗಿ ವಿಚಾರಣೆ ಮಾಡಿ ದುರ್ವ್ಯವಹಾರ ಮಾಡಿದ ಅಧಿಕಾರಿ ಮೇಲೆ ಉಗ್ರ ಕ್ರಮ ಜರುಗಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

SRI G. BASAVANAPPA.—I am one with the hon. Member. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ಬಿ. ಆರ್. ನೀಲಕಂಠಪ್ಪನವರೇ, ತಮ್ಮ ಪ್ರಶ್ನೆಗೆ ಮಂತ್ರಿಗಳು ಟೈಂ ಕೇಳಿದ್ದಾರೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸಲಾದ ಸದರಿ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದಿಡಲಾಯಿತು.

ಭೂ ಸುಧಾರಣಾ ಅಪೀಲು ನ್ಯಾಯಾಧಿಕರಣ

೧೨೩೧. ಶ್ರೀ ಕೆ. ಎಸ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಈವರೆಗೆ ಸ್ಥಾಪಿಸಿರುವ ಭೂ ಸುಧಾರಣಾ ಅಪಿಲೇಟ್ ಟ್ರಿಬ್ಯೂನಲ್‌ಗಳ ಸಂಖ್ಯೆ ಎಷ್ಟು, ಹಾಗೂ ಅವು ಯಾವ ಯಾವ ಸ್ಥಳಗಳಲ್ಲಿವೆ ?

ಆ) ಸದರಿ ಅಪಿಲೇಟ್ ಟ್ರಿಬ್ಯೂನಲ್‌ಗಳಲ್ಲಿ ಈವರೆಗೆ ದಾಖಲು ಆಗಿರುವ ಮೇಲ್ಮನವಿಗಳ ಸಂಖ್ಯೆ ಎಷ್ಟು ?

ಇ) ಸದರಿ ದಾಖಲು ಆಗಿರುವ ಮೇಲ್ಮನವಿಗಳಲ್ಲಿ ತೀರ್ಮಾನವಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು ?

ಈ) ತೀರ್ಮಾನವಾಗಿರುವ ಮೇಲ್ಮನವಿಗಳಲ್ಲಿ ಗೇಣಿದಾರರ ಪರವಾಗಿ ಆಗಿರುವ ತೀರ್ಮಾನಗಳ ಸಂಖ್ಯೆ ಎಷ್ಟು, ಹಾಗೂ ವಿರುದ್ಧವಾದ ತೀರ್ಮಾನಗಳ ಸಂಖ್ಯೆ ಎಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ರಾಜ್ಯದಲ್ಲಿ ಈವರೆಗೆ ಸ್ಥಾಪಿಸಿರುವ ಭೂ ಸುಧಾರಣಾ ಅಪಿಲೇಟ್ ಟ್ರಿಬ್ಯೂನಲ್‌ಗಳು ೩೨. ಅವುಗಳ ಕೇಂದ್ರ ಸ್ಥಾನ ಈ ಕೆಳಕಂಡ ಸ್ಥಳಗಳಲ್ಲಿವೆ,

ಬೆಂಗಳೂರು (೨), ತಮಕೂರು (೨), ಕೋಲಾರ, ಶಿವಮೊಗ್ಗ, ಚಿತ್ರದುರ್ಗ, ಮೈಸೂರು, ಚಿಕ್ಕಮಗಳೂರು, ಹಾಸನ, ಮಂಡ್ಯ, ಮಡಿಕೇರಿ, ಮಂಗಳೂರು, ಗುಲ್ಬರ್ಗಾ, ರಾಯಚೂರು, ಬೀದರ್, ಬಳ್ಳಾರಿ, ಬೆಳಗಾವಿ, ಬಿಜಾಪುರ, ಧಾರವಾಡ, ಕಾರವಾರ, ಚಿಕ್ಕಬಳ್ಳಾಪುರ, ಸಾಗರ, ಚಿಕ್ಕೋಡಿ, ಬಾಗಲಕೋಟೆ, ಹಾವೇರಿ, ಸಿರಸಿ, ಹೊಸಪೇಟೆ, ಪುತ್ತೂರು, ಉಡುಪಿ, ಕುಂದಾಪುರ ಮತ್ತು ನಂಜನಗೂಡು.

ಅ) ೨೪೨,೭೭೭ ಪ್ರಕರಣಗಳು.

ಇ) ೫,೫೮೩ ಪ್ರಕರಣಗಳು.

ಈ) ಗೇಣಿದಾರರ ಪರವಾಗಿ ... ೧,೩೯೭ ಪ್ರಕರಣಗಳು

ಗೇಣಿದಾರರ ವಿರುದ್ಧವಾಗಿ ... ೧,೩೨೦ ಪ್ರಕರಣಗಳು

ಬೀದರ್ ಜಿಲ್ಲೆಯಲ್ಲಿರುವ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ ಬಗ್ಗೆ.

೧೦೯೭. ಶ್ರೀ ಬಸವರಾಜ ಪಾಟೀಲ ಅಟ್ಟೂರು (ಬಸವಕಲ್ಯಾಣ).—ಮಾನ್ಯ ಸಹಾಕರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೀದರ್ ಜಿಲ್ಲೆಯಲ್ಲಿ ಎಷ್ಟು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಿವೆ ?

ಆ) ಈ ಬ್ಯಾಂಕಿನವರು ಸಾಲದ ಮೊತ್ತವನ್ನು ಮಂದಗತಿಯಿಂದ ವಸೂಲಿ ಮಾಡಂತ್ತಿರುವುದರ ಕಾರಣಗಳೇನು ?

ಶ್ರೀ ಎಚ್. ಏಕಾಂತಯ್ಯ (ಸಹಾಕಾರ ಸಚಿವರು). —

ಅ) ಬೀದರ್ ಜಿಲ್ಲೆಯಲ್ಲಿ ಐದು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು ಇವೆ.

ಆ) ಈ ಬ್ಯಾಂಕುಗಳಿಂದ ಸಾಲ ಪಡೆದ ರೈತರಿಗೆ ನೀರಾವರಿ ಸೌಲಭ್ಯ ಇಲ್ಲದಿರುವುದು ಹಾಗೂ ಬರಗಾಲದ ಪರಿಸ್ಥಿತಿಗಳಿಂದಾಗಿ ಬೀದರ್ ಜಿಲ್ಲೆಯ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದಿ ಬ್ಯಾಂಕುಗಳ ಸಾಲ ವಸೂಲಿ ತೃಪ್ತಿಕರವಾಗಿಲ್ಲ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಬರಪರಿಹಾರ ಕಾಮಗಾರಿಗಳು

೧೯೩. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ೧೯೮೭-೮೮ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಬರಗಾಲ ಕಾಮಗಾರಿಗಾಗಿ ಒಟ್ಟು ಎಷ್ಟು ಹಣ ಮತ್ತು ಆಹಾರ ಧಾನ್ಯವನ್ನು ಬಿಡುಗಡೆ ಮಾಡಲಾಗಿದೆ?

(ಆ) ಪ್ರತಿ ತಾಲ್ಲೂಕಿಗೂ ಖರ್ಚಾದ ವಿವರ ಕೊಡುವುದು.,

(ಇ) ಯಾವ ಯಾವ ಕಾಮಗಾರಿಗೆ ಎಷ್ಟೆಷ್ಟು ಖರ್ಚಾಗಿದೆ?

ಶ್ರೀ ಎಸ್. ಆರ್. ಬೊಮ್ಮಾಯಿ, (ಕಂದಾಯ ಮತ್ತು ಯೋಜನಾ ಮಂತ್ರಿಯವರು).—

ಅ) ಬಿಡುಗಡೆ ಆದ ಹಣ ರೂ. ೧೨.೦೦ ಲಕ್ಷ

ವಿತರಣೆ ಮಾಡಿದ ಆಹಾರ ಧಾನ್ಯ ೧೩೭೬.೫೯ ಕ್ವಿಂಟಾಲುಗಳು